

# ಸರಯೂ
ವಿದ್ಯಾಕೇಂದ್ರ ವಾರ್ತಾಪತ್ರ


**SARAYU** - Kannada Monthly  Regn. No. KARKAN/2014/62363
July  Vol. : 3  Issue : 2  5118/ದುರ್ಮುಖ ಸಂವತ್ಸರ ಜುಲೈ 2016  ಪುಟ 8  Rs. 10/-

Postal Regn No. PTR/133/2015-17
Licensed to Post without pre-payment.
License No.: SK/WPP/PTR/177/2015-17





ಪ್ರಾಥಮಿಕ ಶಾಲೆ (17–6–2016)




ಪ್ರೌಢ ಶಾಲೆ (15–6–2016)




ಪದವಿಪೂರ್ವ ವಿಭಾಗ (16–6–2016)

**2016–17ರ ದಾಖಲಾತಿಯ ಅಂಕಿ ಅಂಶಗಳು (30–6–2016ರ ವರೆಗೆ)**

| ಶಿಶುಮಂದಿರ | ಪ್ರಾಥಮಿಕ | ಪ್ರೌಢ | ಪದವಿಪೂರ್ವ | ಪದವಿ | ವಸತಿನಿಲಯ |
|---|---|---|---|---|---|
| 250 | 924 | 899 | 737 | 390 | 228 |

ವಿದ್ಯಾಕೇಂದ್ರದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ : **3200**

ಈ ವರ್ಷದ ದಾಖಲಾತಿ ಹಾಗೂ ನೇಮಕಾತಿಯ ವಿಭಾಗವಾರು, ವಿಷಯವಾರು, ಶಿಕ್ಷಕ–ಬೋಧಕೇತರರ ಅಂಕಿ ಅಂಶಗಳು ಮುಂದಿನ ಸಂಚಿಕೆಯಲ್ಲಿ.

## ಆಗತ–ಸ್ವಾಗತ
### 2016–17

ಶ್ರೀರಾಮ ವಿದ್ಯಾಕೇಂದ್ರದ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ವಿಭಾಗಗಳಲ್ಲಿ ನಡೆದ ಪ್ರವೇಶೋತ್ಸವ **ಆಗತ–ಸ್ವಾಗತ.**

ಈ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಆರತಿ ಬೆಳಗಿ ತಿಲಕವಿಟ್ಟು ಆಶೀರ್ವದಿಸಲಾಯಿತು. ಅವರು ಅಗ್ನಿಗೆ ಘೃತಾಹುತಿ ನೀಡಿ ಭಾರತಮಾತೆಗೆ ಪುಷ್ಪಾರ್ಚನೆಗೈದರು.

**ಭಾಗವಹಿಸಿದ ಗಣ್ಯರು :**

**ಪ್ರಾಥಮಿಕ ವಿಭಾಗ :**

ಬೆಳ್ತಂಗಡಿಯ ವಕೀಲ ಶ್ರೀ ಸುಬ್ರಹ್ಮಣ್ಯ ಕುಮಾರ್ ಅಗರ್ತ, MRPL ನ ಜನರಲ್ ಮ್ಯಾನೇಜರ್ ಶ್ರೀ ಶ್ರೀಪ್ರಸಾದ್. ಬಿ.ಹೆಚ್.ವಿ, MRPLನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಹೆಚ್. ಕುಮಾರ್, ಉದ್ಯಮಿ ಶ್ರೀ ವಿಕ್ರಮ್ ಪೈ, ಕುಂಬ್ಳೆ ಪಂಚಾಯತ್ ಅಧ್ಯಕ್ಷ ಶ್ರೀ ಶಂಕರ್ ಆಳ್ವ, ರಾ.ಸ್ವ.ಸಂ. ಕಾರ್ಯಕರ್ತರಾದ ಶ್ರೀ ದಯಾನಂದ ರಾವ್ ಹಾಗೂ ಶ್ರೀ ರವೀಂದ್ರನ್.

ಈ ಸಂದರ್ಭದಲ್ಲಿ 2015–16ನೇ ಶೈಕ್ಷಣಿಕ ವರ್ಷದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

**ಪ್ರೌಢಶಾಲಾ ವಿಭಾಗ :**

ಡಾ। ಆಕಾಶ್‌ರಾಜ್ ಉಡುಪಿ, ಕಿರುತೆರೆಯ ಖ್ಯಾತ ಸಂಗೀತ ನಿರ್ದೇಶಕರಾದ ಶ್ರೀ ಜಿತೇಂದ್ರ ರಾವ್.

ಇದರ ಜೊತೆಗೆ ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ದಿನವನ್ನೂ ಆಚರಿಸಲಾಯಿತು.

**ಪದವಿಪೂರ್ವ ವಿಭಾಗ :**

ಉತ್ತರ ಪ್ರಾಂತ ಗೋಸೇವಾ ಪ್ರಮುಖ್ ಶ್ರೀ ದತ್ತಾತ್ರೇಯ ಭಟ್ ಹುಬ್ಬಳ್ಳಿ, ವಿಶ್ವಹಿಂದು ಪರಿಷತ್ ಉತ್ತರ ಪ್ರಾಂತ ಉಪಾಧ್ಯಕ್ಷ ಶ್ರೀ ಶಾಂತಣ್ಣ ಕಡಿದಾಳ್, ವಿಶ್ವ ಹಿಂದು ಪರಿಷತ್‌ನ ಚಿಕ್ಕೋಡಿ ಅಧ್ಯಕ್ಷ ಶ್ರೀ ಮಂಜುನಾಥ್, ಶಶಿಧರ್ ರೊಟ್ಟಿ ಚಿಕ್ಕೋಡಿ, ಶ್ರೀ ಸತೀಶ್ ಆರಾಧ್ಯ ಮೈಸೂರು.

ಎಲ್ಲಾ ವಿಭಾಗಳಲ್ಲೂ ಸಂಸ್ಥೆಯ ಸಂಚಾಲಕ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಮುಖ್ಯ ಕಾರ್ಯನಿರ್ವಾಹಕ ಶ್ರೀ ವಸಂತ ಮಾಧವ, ಡಾ। ಕಮಲಾ ಭಟ್ ಹಾಗೂ ವಿಭಾಗ ಮುಖ್ಯಸ್ಥರುಗಳು ಉಪಸ್ಥಿತರಿದ್ದರು.

# ಸುಳ್ಳು ಹೇಳದ ನಾಲಿಗೆ

ಚಿಂತನರಶ್ಮಿ

ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರು ಅಭಿಜಾತ ಕಲಾವಿದ. ಅವರ ಅಭಿನಯ, ಹಾಡುಗಳ ಸೊಬಗನ್ನು ಸವಿದ ಸಹಸ್ರಾರು ಜನ ಧನ್ಯರು. ಅವರ ಕೆಲ ನಾಟಕಗಳಾದ ಪ್ರಹ್ಲಾದ ಚರಿತ್ರೆ, ಸಾರಂಗಧರ ಚರಿತ್ರೆ, ಶಾಕುಂತಲ, ಮನ್ಮಥ ವಿಜಯ ಜನಮನದಲ್ಲಿ ವಿಶೇಷ ಸ್ಥಾನವನ್ನು ಗಳಿಸಿದ್ದವು. ವರದಾಚಾರ್ಯರು ತುಂಬಾ ಉದಾರಿಗಳು. ತಮ್ಮ ಕಂಪನಿಯಲ್ಲಿ ಕೆಲಸ ಮಾಡುವವರನ್ನು ಅತ್ಯಂತ ವಿಶ್ವಾಸದಿಂದ, ಪ್ರೀತಿಯಿಂದ ಕಂಡು ಅವರ ಅವಶ್ಯಕತೆಗಳನ್ನು ತಪ್ಪದೇ ಪೂರೈಸುವವರು. ಯಾರೇ ಅವರ ಬಳಿ ಏನನ್ನಾದರೂ ಬೇಡಲು ಹೋದರೆ ಬರಿಗೈಯಲ್ಲಿ ಮರಳಿ ಬಂದಿದ್ದಿಲ್ಲ. ಆ ಹೊತ್ತಿನಲ್ಲಿ ಕೈಯಲ್ಲಿ ಏನಿತ್ತೋ ಅದನ್ನೇ ಕೊಟ್ಟು "ಕೃಷ್ಣಾರ್ಪಣಂ" ಎಂದು ಬಿಡುವರು. ಯಾಚಕರ ಅದೃಷ್ಟದಂತೆ ಲಾಭ.

ವರದಾಚಾರ್ಯರು ಒಂದು ಸಲ ಒಬ್ಬ ಸಾಹುಕಾರನಿಂದ ಇಪ್ಪತ್ತು ಸಾವಿರ ರೂಪಾಯಿ ಸಾಲ ಮಾಡಿದ್ದರು. ಲಾಭವಿಲ್ಲದೆ ನಾಟಕ ಕಂಪನಿಗಳು ನಡೆಯುತ್ತಿರುವುದರಿಂದ ಹಣ ಪಾವತಿ ಮಾಡಲಾಗಿರಲಿಲ್ಲ. ಅಸಲು, ಬಡ್ಡಿ ಸೇರಿ ಹಣದ ಮೊತ್ತ ಮೂವತ್ತು ಸಾವಿರವಾಗಿತ್ತು. ಇನ್ನು ತಡೆದುಕೊಳ್ಳುವುದು ಸಾಧ್ಯವಿಲ್ಲವೆನ್ನಿಸಿದಾಗ ಸಾಹುಕಾರ ಇವರ ಮೇಲೆ ಮೊಕದ್ದಮೆ ಹೂಡಿದ. ಕೋರ್ಟಿನಿಂದ ಜಪ್ತಿಗೆ ಆದೇಶ ಹೊರಡಿಸಿ, ಕಂಪನಿಯ ವಸ್ತುಗಳನ್ನು ಮಾರಿ ಆದಷ್ಟು ಹಣ ತುಂಬಿಕೊಳ್ಳುವುದು ಅವನ ಉದ್ದೇಶ.

ವರದಾಚಾರ್ಯರ ಸ್ನೇಹಿತೊಬ್ಬರು ಒಬ್ಬ ಲಾಯರ ಬಳಿ ಹೋಗಿ ಕಾಗದಗಳನ್ನೆಲ್ಲ ತೋರಿಸಿ ಈ ಜಪ್ತಿಯಿಂದ ತಪ್ಪಿಸಿಕೊಳ್ಳಲು ಏನಾದರೂ ಅವಕಾಶವಿದೆಯೇ ಎಂದು ಕೇಳಿದರು. ಲಾಯರು ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ ಹೇಳಿದರು, "ಸಾಹುಕಾರರ ಕೇಸು ಬಹಳ ಭದ್ರವಾಗಿದೆ. ಪಾರಾಗುವುದು ಕಷ್ಟ. ಆದರೆ ಒಂದು ವಿಶೇಷವಿದೆ. ಅವರು ಹಾಕಿದ ಮೊಕದ್ದಮೆಯಲ್ಲಿ ಒಂದು ಮುಖ್ಯ ಕಾಗದ ಇಲ್ಲ. ಅದಿಲ್ಲದೇ ಸಾಹುಕಾರನಿಗೆ ಗಟ್ಟಿ ಸಾಕ್ಷಿ ದೊರಕಲಾರದು. ಕೋರ್ಟಿನಲ್ಲಿ ಲಾಯರೋ, ಜಡ್ಜಿಯೋ ಈ ವಿಷಯದ ಬಗ್ಗೆ ಪ್ರಶ್ನೆ ಕೇಳಿದರೆ ವರದಾಚಾರ್ಯರು ತಮಗೆ ಗೊತ್ತಿಲ್ಲವೆಂದೋ ಅಥವಾ ನೆನಪಿಲ್ಲವೆಂದೋ ಹೇಳಿದರೆ ಕೇಸು ಬಿದ್ದು ಹೋಗುತ್ತದೆ. ವರದಾಚಾರ್ಯರಿಗೆ ಹೀಗೆ ಮಾಡಲು ಹೇಳಿ" ಎಂದರು.

ಈ ಮಾತನ್ನು ಸ್ನೇಹಿತರು ಹೇಳಿದಾಗ ವರದಾಚಾರ್ಯರು ತಮಗೆ ಸಹಜವಾಗಿದ್ದ ಅಟ್ಟಹಾಸ ನಗುವನ್ನು ನಕ್ಕು, "ಛೇ, ಮೂವತ್ತು ಸಾವಿರ ರೂಪಾಯಿಗೋಸ್ಕರ ಈ ನಾಲಿಗೆ ಸುಳ್ಳು ಹೇಳಬೇಕೇ? ಭಗವಂತ ಇಂಥ ಎಷ್ಟು ಮೂವತ್ತು ಸಾವಿರಗಳನ್ನು ಅನುಗ್ರಹಿಸಿದ್ದಾನೆ! ಮುಂದೆಯೂ ಕೊಟ್ಟಾನು. ಈಗ ಬೇಕಾದರೆ ನನ್ನ ಕಂಪನಿಯ ಸಮಸ್ತ ವಸ್ತುಗಳನ್ನು ಸಾಹುಕಾರ ತೆಗೆದುಕೊಳ್ಳಲಿ. ಮತ್ತೆ ಬೇರೆ ಸಾಲ ಮಾಡಿ ಹೊಸ ಪರದೆ, ಹೊಸ ಡ್ರೆಸ್ ಹಾಕಿ ನಾಟಕ ಮಾಡಿ ಎರಡೂ ಸಾಲ ತೀರಿಸೋಣ. ಸುಳ್ಳು ಹೇಳಿ ಋಣದಿಂದ ತಪ್ಪಿಸಿಕೊಳ್ಳುವುದು ನನ್ನಿಂದಾಗದು" ಎಂದರು, ಹಾಗೆಯೇ ನಡೆದರು.

ಇದು ಆ ತಲೆಮಾರಿನ ಜನದ ಅಂತರಂಗದ ಸತ್ವ. ಈ ತತ್ವದ ಪ್ರಖರತೆ ಅವರ ಜೀವನದಲ್ಲೆಲ್ಲ ಬೆಳಕು ಸುರಿದಿತ್ತು. ಆ ಕಾಲದ ಜನರ ಜೀವನ ಮೌಲ್ಯ ಇದು. ಎಂಥ ಪರಿಸ್ಥಿತಿಯಲ್ಲೂ ಸತ್ಯವನ್ನು ಬಿಡದ, ಋಜುತೆಯನ್ನು ಬಿಗಿದಪ್ಪಿಕೊಂಡ ಇವರು ಸರ್ವಕಾಲಕ್ಕೂ ಮಾನ್ಯರು. ಇಂಥ ಮಹಾನುಭಾವರಿಂದ ನಮ್ಮ ನಾಡು ಪೂಜ್ಯತೆಯನ್ನು ಪಡೆದಿದೆ. ■

# ಸುಭಾಷಿತ ಮಂಜರೀ

ಯಾಂತಿ ನ್ಯಾಯಪ್ರವೃತ್ತಸ್ಯ
ತಿರ್ಯಂಚೋ ಽಪಿ ಸಹಾಯತಾಂ ।
ಅಪಂಥಾನಂ ತು ಗಚ್ಛಂತಂ
ಸೋದರೋ ಽಪಿ ವಿಮುಂಚತಿ ॥

–ಅನರ್ಘರಾಘವ, 1–4

ನ್ಯಾಯವಾದ ದಾರಿಯಲ್ಲಿ ಹೋಗುವವನಿಗೆ, ರಾಮನಿಗೆ ಕೋತಿಗಳು ಸಹಾಯವಾದಂತೆ, ಮನುಷ್ಯೇತರ ಪ್ರಾಣಿಗಳೂ ಸಹಾಯ ಮಾಡುತ್ತವೆ. ತಪ್ಪುದಾರಿ ತುಳಿಯುವವನನ್ನು, ರಾವಣನನ್ನು ವಿಭೀಷಣನು ಬಿಟ್ಟಂತೆ, ಸಹೋದರನೂ ಕೈಬಿಡುತ್ತಾನೆ.

## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ದಿವ್ಯಾಕುಮಾರಿ (ಶಿಶುಮಂದಿರ)
ಕಾವ್ಯ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಶ್ರೀಲತಾ (ಪದವಿಪೂರ್ವ)
ಜ್ಯೋತಿ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು
**ವಿನ್ಯಾಸ :** ಅನಘ ಡಿಜಿಟಲ್ ಸ್ಕ್ವೇರ್, ಕೈಕಂಬ

# ರೋಗನಿರೋಧಕ ಉಪ್ಪು

ಬುತ್ತಿ

'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ಮಾತು ತುಂಬಾ ಜನಜನಿತ. ಅಮ್ಮನಿಲ್ಲದ ಮನೆ ಮನೆಯಲ್ಲ, ಉಪ್ಪಿಲ್ಲದ ಅಡುಗೆ ಅಡುಗೆಯಲ್ಲ, ಹಾಗಿದ್ದರೆ ಉಪ್ಪು ಎಷ್ಟು ಪ್ರಾಮುಖ್ಯ ಎಂಬುದನ್ನು ತಿಳಿಯೋಣ. ಅಡುಗೆಗೆ ಉಪ್ಪು ಬೇಕೇ ಬೇಕು. ಉಪ್ಪಿಲ್ಲದ ಸಪ್ಪೆ ಅಡುಗೆ ಯಾರಿಗೂ ಬೇಡ. ಆದರೆ ಊಟಕ್ಕೆ ಸೈ ಅಲ್ಲದೆ ಉಪ್ಪು ಔಷಧಿಯಾಗಿಯೂ ನಮ್ಮ ದೇಹದ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಕಲ್ಲುಪ್ಪು, ಸೈಂಧವ ಲವಣ, ಹುಡಿ ಉಪ್ಪು (ಬಿಳಿ ಉಪ್ಪು) ಹೀಗೆ ಉಪ್ಪಿನಲ್ಲಿ ವಿಧಗಳಿವೆ. ಇಲ್ಲಿ ನಾವು ಕಲ್ಲುಪ್ಪಿನ ಮಹತ್ವವನ್ನು ತಿಳಿಯೋಣ.

ಇಂಗ್ಲೀಷ್‌ನಲ್ಲಿ 'Black salt' ಎಂದು ಕರೆಯಲ್ಪಡುವ ಕಲ್ಲುಪ್ಪು ನಮ್ಮ ದೇಹದ ರಕ್ತದೊತ್ತಡವನ್ನು ಕಾಪಾಡುವಲ್ಲಿ ಬಹಳಷ್ಟು ಸಹಕಾರಿ. ಕಡಿಮೆ ರಕ್ತದೊತ್ತಡದಿಂದ ಬಳಲುವ ವ್ಯಕ್ತಿಗೆ ರಕ್ತದೊತ್ತಡವನ್ನು ಏರಿಸಲು ಅತ್ಯಂತ ಸರಳ ಉಪಾಯ ಉಪ್ಪು ಶರ್ಬತ್ತು. ಒಂದು ಲೋಟ ನೀರಿಗೆ ಲಿಂಬೆ ಹುಳಿ ಹಿಂಡಿ ನಾಲ್ಕು ಚಮಚ ಸಕ್ಕರೆ ಹಾಗೂ ಒಂದು ಚಮಚ ಕಲ್ಲುಪ್ಪು ಸೇರಿಸಿ ಕುಡಿಸಿದರೆ ವ್ಯಕ್ತಿ ಬಹಳ ಬೇಗ ಸುಧಾರಿಸಿಕೊಳ್ಳುತ್ತಾನೆ. ರಕ್ತದ ಒತ್ತಡವನ್ನು ಏರಿಸಲು ದಿನಕ್ಕೆ ನಾಲ್ಕಾರು ಬಾರಿ ಹೀಗೆ ಉಪ್ಪು ಶರ್ಬತ್ತು ಕುಡಿದರೆ ರಕ್ತದೊತ್ತಡದ ಸಮಸ್ಯೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ದೇಹಕ್ಕೆ ಬೇಕಾದ ಸೋಡಿಯಂ ಪ್ರಮಾಣವನ್ನು ಕಾಯ್ದುಕೊಳ್ಳಲು ಆಹಾರದ ಮೂಲಕ ನಿಯಮಿತವಾಗಿ ಉಪ್ಪನ್ನು ಸೇವಿಸಬೇಕು. ಹಿತ–ಮಿತವಾದ ಉಪ್ಪಿನ ಸೇವನೆ ಹೃದಯ ಸಂಬಂಧಿ ರೋಗಗಳನ್ನೂ ದೂರಮಾಡುತ್ತದೆ. ಕಾಲಿನ ಹಿಮ್ಮಡಿ ಸಿಡಿತವುಂಟಾದರೆ ಒಂದೆರಡು ಲೀಟರ್ ಬಿಸಿ ನೀರಿಗೆ ಕಾಲು ಕೆ.ಜಿ. ಕಲ್ಲುಪ್ಪು ಸೇರಿಸಿ ಕಾಲನ್ನು ಬಿಸಿನೀರಲ್ಲಿ ಹತ್ತು ನಿಮಿಷ ಇಡಬೇಕು. ನೀರು ತಣಿದಾಗ ಪುನಃ ಬಿಸಿ ಮಾಡಿಕೊಳ್ಳಬಹುದು. ದಿನಕ್ಕೆ 3–4 ಬಾರಿ ಈ ರೀತಿ ಮಾಡಿದಾಗ ಹಿಮ್ಮಡಿ ನೋವು ಪೂರ್ತಿ ಕಡಿಮೆಯಾಗುವುದು. ಆ ಉಪ್ಪು ನೀರನ್ನು ತೆಂಗಿನ ಗಿಡದ ಬುಡಕ್ಕೆ ಹಾಕಿದರೆ ಉಪಯುಕ್ತವಾಗುತ್ತದೆ.

ಮೈ–ಕೈಯಲ್ಲಿ ಬಾವು–ನೋವು ಇದ್ದಾಗ ಒಂದು ಬಟ್ಟೆಗೆ ಹಾಕಿ, ನೋವಿನ ಜಾಗಕ್ಕೆ ಬಿಸಿ ಶಾಖ ಕೊಡಬೇಕು. ಬಿಸಿ ತಣಿದಾಗ ಪುನಃ ಬಿಸಿ ಮಾಡಿಕೊಂಡು 2–3 ಬಾರಿ ಶಾಖ ಕೊಟ್ಟಾಗ ನೋವು ನಿವಾರಣೆಯಾಗುತ್ತದೆ.

(7ನೇ ಪುಟಕ್ಕೆ)

## ಶಿಶುಮಂದಿರ

### ಶಿಶುಮಂದಿರ ತರಬೇತಿ ಶಿಬಿರ

ದಿನಾಂಕ 09-05-2016 ರಿಂದ 20-5-2016ವರೆಗೆ ಶಿಶುಮಂದಿರಗಳ ಶಿಕ್ಷಕಿಯರಿಗೆ ಹಿಂದು ಸೇವಾ ಪ್ರತಿಷ್ಠಾನ ಸಮಗ್ರ ಶಿಶು ಶಿಕ್ಷಣ ಸಂಶೋಧನಾ ವಿಭಾಗ ಬೆಂಗಳೂರು ವತಿಯಿಂದ 10 ದಿನಗಳ ಕಾಲ ತರಬೇತಿ ಶಿಬಿರವು ಶಿವಮೊಗ್ಗದ ಕಲ್ಲಹಳ್ಳಿ ಮಾಧವ ನೆಲೆಯಲ್ಲಿ ನಡೆಯಿತು. ಶಿಬಿರದಲ್ಲಿ ಶಿಶುಮಂದಿರದ 10 ಮಂದಿ ಮಾತಾಜಿಗಳು ಭಾಗವಹಿಸಿದ್ದರು. ಶಿಬಿರದಲ್ಲಿ ದೈನಂದಿನ ವಿಕಾಸ, ಜ್ಞಾನೇಂದ್ರಿಯ ವಿಕಾಸ, ಭಾಷಾ ಬೆಳವಣಿಗೆ, ಗಣಿತ, ವಿಜ್ಞಾನ, ಪರಿಸರ, ಸೃಜನಶೀಲ ಚಟುವಟಿಕೆ ಸಿದ್ಧತೆ ಪ್ರಯೋಗ ಈ ವಿಷಯಗಳ ಬಗ್ಗೆ ತಿಳಿಸಿಕೊಡಲಾಯಿತು.

### ಶಿಶುಮಂದಿರ ಚಟುವಟಿಕೆ ಕಾರ್ಯಾಗಾರ

ದಿನಾಂಕ 13-06-2016 ರಿಂದ 15-06-2016



ಶ್ರೀರಾಮ ಶಿಶುಮಂದಿರದಲ್ಲಿ ಪಾಲಕರಿಗೆ ಮುಖ್ಯ ಮಾತಾಜಿ ಭಾಗಂಗಾ ಶಿಶುಮಂದಿರದಲ್ಲಿ ನೀಡುವಂತಹ ಶಿಕ್ಷಣದ ಬಗ್ಗೆ ತಿಳಿಸಿಕೊಟ್ಟರು. ಮಗುವನ್ನು ಅರ್ಥಮಾಡಿಕೊಳ್ಳುವುದು, ಮಗುವಿನಲ್ಲಿರುವ ಸ್ವಭಾವಗಳು, ಹಾಗೆಯೇ ಶಿಶುಮಂದಿರದಲ್ಲಿ ಜೋಡಿಸಿ ಇಟ್ಟಂತಹ ಪ್ರತಿಯೊಂದು ಸಲಕರಣೆಗಳಲ್ಲಿಯೂ ಮಗುವಿನ ಇಂದ್ರಿಯ ವಿಕಾಸ ಯಾವ ರೀತಿ ಆಗುತ್ತದೆ ಎಂಬುದನ್ನು ಪ್ರಾತ್ಯಕ್ಷಿಕವಾಗಿ ಮಾಡಿ ತೋರಿಸಿದರು. ಒಟ್ಟು 101 ಪಾಲಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಕಳೆದ 10-12 ವರ್ಷಗಳಿಂದ ಶಿಶುಮಂದಿರದ ಪರಿಸರದಲ್ಲೇ ಓಡಾಡುತ್ತಿದ್ದ ಹಿರಿಯರೊಬ್ಬರು ಇದೇ ಮೊದಲ ಬಾರಿಗೆ ಶಿಶುಮಂದಿರದ ಚಟುವಟಿಕೆಗಳ ಪರಿಚಯ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಬಳಿಕ ಅವರು "ಇಷ್ಟೊಂದು ವೈಜ್ಞಾನಿಕವಾಗಿ ಇಲ್ಲಿ ಶಿಕ್ಷಣ ಸಿಗುತ್ತದೆ ಎಂಬ ಕಲ್ಪನೆಯೇ ನನಗಿರಲಿಲ್ಲ. ನಿಜವಾಗಿಯೂ ಎಲ್ಲ ಶಿಶುಗಳಿಗೂ ಈ ಶಿಕ್ಷಣ ಖಂಡಿತ ಸಿಗಬೇಕಿದೆ." ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.**

## ಪ್ರಾಥಮಿಕ ಶಾಲೆ

### ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ



ದಿನಾಂಕ 25.06.2016ರಂದು ಶ್ರೀರಾಮ ಹಿ.ಪ್ರಾಥಮಿಕ ಶಾಲೆಯಲ್ಲಿ ಭಜನೆ ಮತ್ತು ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮ ನಡೆಯಿತು.

ಅತಿಥಿಗಳಾಗಿ ಶ್ರೀರಾಮ ಪ್ರೌಢಶಾಲೆಯ ಶಿಕ್ಷಕ ಪ್ರಶಾಂತ್, ವಕೀಲರಾದ ಶಿವಗಿರಿ ಸತೀಶ್ ಭಟ್ ವಿವಿಧ ನೀತಿ ಕಥೆಗಳನ್ನು ಹೇಳುತ್ತಾ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

### ಪಾಠ ಪುಸ್ತಕ ವಿತರಣೆ



ದಿನಾಂಕ 31.05.2016 ರಂದು 1ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶಿವಗಿರಿ ಸತೀಶ್ ಭಟ್ ಅವರು ಪಾಠ ಪುಸ್ತಕ ವಿತರಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ-ದರು. ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

### ಕಾರ್ಯಾಗಾರ

ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ತೆಂಕಿಲ, ಪುತ್ತೂರು ಇಲ್ಲಿ ನಡೆದ ಕನ್ನಡ, ಇಂಗ್ಲೀಷ್, ಸಂಸ್ಕೃತ, ಗಣಿತ, ವಿಜ್ಞಾನ, ಸಮಾಜ, ಮೌಲ್ಯಶಿಕ್ಷಣ, ದೈಹಿಕಶಿಕ್ಷಣ ಕಾರ್ಯಾಗಾರಗಳಲ್ಲಿ ಪ್ರಾಥಮಿಕ ವಿಭಾಗದ 13 ಶಿಕ್ಷಕರು ಭಾಗವಹಿಸಿದ್ದರು.

### ಪೂರ್ವಗುರುಕುಲ ಪೋಷಕರ ಸಮಾವೇಶ



ದಿನಾಂಕ17.06.2016ರಂದುಪೂರ್ವಗುರುಕುಲ ವಿದ್ಯಾರ್ಥಿಗಳ ಪೋಷಕರ ಸಮಾವೇಶ ನಡೆಯಿತು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರು ಡಾ.ಪ್ರಭಾಕರ ಭಟ್ ಕಲ್ಲಡ್ಕ ಇವರು ವಿದ್ಯಾಕೇಂದ್ರವು ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕೊಡುವ ಉದ್ದೇಶವನ್ನು ಇಟ್ಟುಕೊಂಡು ಒಂದರಿಂದ ನಾಲ್ಕನೇ ತರಗತಿಯವರೆಗೆ ಪೂರ್ವಗುರುಕುಲ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಿದೆ.

ಈ ನಿಟ್ಟಿನಲ್ಲಿ ಸರ್ಕಾರಿ ಪಠ್ಯಕ್ರಮದ ಜೊತೆಗೆ ಹಿಂದೂ ಸಂಸ್ಕೃತಿಯ ಆಚಾರ ವಿಚಾರ ಸಂಪ್ರದಾಯಗಳನ್ನು ಉಳಿಸಿ ಬೆಳೆಸುವ ಉದ್ದೇಶವನ್ನು ಇಟ್ಟುಕೊಂಡಿದೆ. ತರಗತಿಯಲ್ಲಿ ಮಕ್ಕಳಿಗೆ ಭಯಮುಕ್ತ ವಾತಾವರಣ ಕಲ್ಪಿಸಿ ಮಕ್ಕಳ ಮನಸ್ಸನ್ನು ಅರಳಿಸಿ ಸ್ವ-ಕಲಿಕೆಗೆ ಪ್ರೇರೇಪಿಸುವುದೇ ಪೂರ್ವಗುರುಕುಲ ಶಿಕ್ಷಣದ ವ್ಯವಸ್ಥೆಯಾಗಿದೆ.

ಜಂಕ್ ಫುಡ್‌ಗಳಿಂದ ನೀವು ದೂರವಿದ್ದು ಮಕ್ಕಳನ್ನು ದೂರವಿರಿಸಬೇಕು, ಪ್ರಾರ್ಥನೆ ಭಜನೆಗೆ ಮಕ್ಕಳನ್ನು ಪ್ರೇರೇಪಿಸಬೇಕು ಎಂದು ಪೋಷಕರಿಗೆ ಕರೆ ನೀಡಿದರು.

### ದೈಹಿಕ ಶಿಕ್ಷಕರ ಕಾರ್ಯಾಗಾರ

27.06.2016ರಂದು ವಿವೇಕಾನಂದ ತಾಂತ್ರಿಕ ವಿದ್ಯಾಸಂಸ್ಥೆ ಪುತ್ತೂರು ಇಲ್ಲಿ ನಡೆದ ದೈಹಿಕ ಶಿಕ್ಷಣ ಕಾರ್ಯಾಗಾರದಲ್ಲಿ ಇಬ್ಬರು ದೈಹಿಕ ಶಿಕ್ಷಕರು ಭಾಗವಹಿಸಿದ್ದರು.

### ವಿಶ್ವ ಯೋಗ ದಿನಾಚರಣೆ

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ದಿನಾಂಕ 21.06.2016ರಂದು ಆಚರಿಸಲಾಯಿತು.



ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ಸೌಮ್ಯ ಇವರು ಯೋಗದ ಮಹತ್ವವನ್ನು ತಿಳಿಸಿಕೊಟ್ಟರು. ಮಕ್ಕಳು ಸಾಮೂಹಿಕವಾಗಿ ವಿವಿಧ ಆಸನ ಮತ್ತು ಪ್ರಾಣಾಯಾಮಗಳನ್ನು ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಪಿ.ಕೆ.ಪದ್ಮನಾಭ, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು, ಸಹಶಿಕ್ಷಕಿ ಅನ್ನಪೂರ್ಣ ಉಪಸ್ಥಿತರಿದ್ದರು.

# ಪ್ರೌಢ ಶಾಲೆ

## ನೂತನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ

1.6.2016



ದೇವರು ಸರ್ವಶಕ್ತ. ಹೊಸ ಹೆಜ್ಜೆ ಇಡುವ ಮುನ್ನ ತಾಯಿ ಭಾರತಿಯನ್ನು ಆರಾಧಿಸಬೇಕು, ಹಿರಿಯರನ್ನು ಗೌರವಿಸಬೇಕು. ಇದರಿಂದ ಮುಂದಿನ ಕಾಯಕ ಯಶಸ್ವಿಯಾಗುವುದು ಎಂದು ಶ್ರೀರಾಮ ವಿದ್ಯಾಕೇಂದ್ರ ಮುಖ್ಯಕಾರ್ಯನಿರ್ವಾಹಕರು ಶ್ರೀ ವಸಂತಮಾಧವ ಶ್ರೀಮಾನ್ ತಿಳಿಸಿದರು.

ಅವರು ಶ್ರೀರಾಮ ಪ್ರೌಢಶಾಲಾ ವಿಭಾಗದಲ್ಲಿ ನಡೆದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಬಂಟ್ವಾಳ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಯಾನಂದ ಪೆರಾಜೆ ಮಾತನಾಡಿ ವಿದ್ಯಾರ್ಥಿಗಳು ಉತ್ತಮ ಸಂಸ್ಕೃತಿ, ಸಂಸ್ಕಾರ, ಗುಣ, ನಡತೆ ಬೆಳೆಸಿಕೊಳ್ಳಬೇಕು. ಏಕಾಗ್ರತೆಯಿಂದ ಅಭ್ಯಾಸ ನಡೆಸಿದರೆ ಯಶಸ್ಸು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆಗೈದು ಹಿರಿಯರಿಂದ ತಿಲಕಧಾರಣೆ ಪಡೆದು ಹಿರಿಯರ ಆಶೀರ್ವಾದ ಪಡೆದರು.

**ಶ್ರೀ ಜಯಾನಂದ ಪೆರಾಜೆ ಇವರು 2 ದಶಕಗಳಿಗೂ ಹೆಚ್ಚು ಪ್ರೌಢಶಾಲಾ ವಿಭಾಗದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ಕಳೆದ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ನಿವೃತ್ತರಾದರು. ಅವರ ನಿವೃತ್ತ ಜೀವನ ಸುಖಮಯವಾಗಿರಲಿ ಎಂದು ಸರಯೂ ಬಳಗ ಆಶಿಸುತ್ತದೆ.**

## ಅಡಿಕೆ ಸಸಿಗಳ ನೆಡುವಿಕೆ



ವಿಶ್ವಯೋಗ ದಿನಾಚರಣೆಯ ಅಂಗವಾಗಿ ಶ್ರೀರಾಮ ಪ್ರೌಢಶಾಲೆಯ 600 ವಿದ್ಯಾರ್ಥಿಗಳು ಬಾಳ್ತಿಲ ಗ್ರಾಮದ ಸುದೆಕಾರ್‌ನಲ್ಲಿ ಮೂರು ಸಾವಿರಕ್ಕೂ ಹೆಚ್ಚು ಅಡಿಕೆ ಸಸಿಗಳನ್ನು ನೆಟ್ಟರು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್, ಅಧ್ಯಕ್ಷ ಬಿ.ನಾರಾಯಣ ಸೋಮಯಾಜಿಯವರ ಮಾರ್ಗದರ್ಶನದಲ್ಲಿ ಪ್ರಾತ್ಯಕ್ಷಿಕೆಯೊಂದಿಗೆ ವಿದ್ಯಾರ್ಥಿಗಳಿಗೆ ಅಡಿಕೆ ಕೃಷಿಯ ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಯನಿರ್ವಹಣಾಧಿಕಾರಿ ವಸಂತ ಮಾಧವ, ಮುಖ್ಯ ಶಿಕ್ಷಕ ರಮೇಶ್ ಎನ್. ಕಲಾ ಶಿಕ್ಷಕ ಜಿನ್ನಪ್ಪ ಏಳ್ತಿಮಾರ್ ಶಿಕ್ಷಕರಾದ ಕೊಟ್ರೇಶಪ್ಪ, ಬೀನಾ, ದಿವ್ಯ ಹಾಗೂ ರೋಹಿತಾಕ್ಷ ಬೆರ್ಕಳ, ಪಿ.ಕೆ.ಪದ್ಮನಾಭ, ಸುಬ್ರಾಯ ಕಾರಂತ ನಂದಾವರ, ಕಮಲಾಕ್ಷ ಶಂಭೂರು ಮೊದಲಾದವರು ಸಹಕರಿಸಿದರು.

## ಅತಿಥಿಗಳ ಭೇಟಿ



ದಿನಾಂಕ 23.06.2016 ರಂದು ನಡೆದ ಶ್ರೀರಾಮ ಪ್ರೌಢಶಾಲಾ ವಿಭಾಗದ ಸರಸ್ವತಿ ವಂದನಾ ಸಭಾ ಕಾರ್ಯಕ್ರಮದಲ್ಲಿ ಶ್ರೀ ಜಗದೀಶ್ ಪೈ, ಗುತ್ತಿಗೆದಾರರು ಹಾಗೂ ಮಂಜುಶ್ರೀ ವಿದ್ಯಾಸಂಸ್ಥೆಯ ಮ್ಯಾನೇಜರ್ ಶ್ರೀ ನಾರಾಯಣ ರೈ ಉಪಸ್ಥಿತರಿದ್ದರು.

## ಬಾಲಕಾರ್ಮಿಕ ವಿರೋಧಿ ದಿನಾಚರಣೆ

**13.06.2016**

ಬಾಲಕಾರ್ಮಿಕ ಶೋಷಣೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ದಿನಾಂಕ 13/06/2016 ರಂದು ಬಾಲಕಾರ್ಮಿಕ ವಿರೋಧಿ ದಿನಾಚರಣೆ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮದಲ್ಲಿ ಲೋಹಿತ್ 10 ದುರ್ಗಾವತಿ, ದಿನಾಚರಣೆಯ ಮಹತ್ವದ ಬಗ್ಗೆ ತಿಳಿಸಿದನು. ನಂತರ ವಿದ್ಯಾರ್ಥಿಗಳಿಗೆ ಬಾಲಕಾರ್ಮಿಕ ವಿರೋಧಿಸುವ ಬಗ್ಗೆ ಪ್ರತಿಜ್ಞೆ ಬೋಧಿಸಲಾಯಿತು.

## ಕಿಟ್ ವಿತರಣೆ



ಶ್ರೀರಾಮ ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೈಕಿ ಕಲಿಕಾನ್ಯೂನತೆ ಇರುವ ವಿದ್ಯಾರ್ಥಿಗಳಿಗೆ ಸರ್ವಶಿಕ್ಷಾ ಅಭಿಯಾನದ ಯೋಜನೆಯ ಅಡಿಯಲ್ಲಿ ಎಂ.ಆರ್. ಕಿಟ್ ಹಾಗೂ ದೃಷ್ಟಿದೋಷ ಇರುವ ವಿದ್ಯಾರ್ಥಿಗಳಿಗೆ ಕನ್ನಡಕಗಳನ್ನು ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಾಹಕರು ವಿತರಿಸಿ ಅದರ ಬಳಕೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ರಮೇಶ್ ಎನ್ ಹಾಗೂ ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು.

## ಎನ್.ಎಂ.ಎಂ.ಎಸ್. ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿನಿಯರು



ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ಬೆಂಗಳೂರು ಇದರ ವತಿಯಿಂದ 2015-16ನೇ ಶೈಕ್ಷಣಿಕ ವರ್ಷದ ಎನ್.ಎಂ.ಎಂ.ಎಸ್ ಪರೀಕ್ಷೆಯಲ್ಲಿ ಶ್ರೀರಾಮ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿಯರಾದ ಬಾಳ್ತಿಲ ಗ್ರಾಮದ ಮುಲಾರ್‌ನ ಶ್ರೀ ವೆಂಕಪ್ಪ ಕುಲಾಲ್ ಹಾಗೂ ಮಮತಾ ದಂಪತಿಗಳ ಪುತ್ರಿ ಕು. ಯತಿಕಾ ಎಂ, ಬರೆಪ್ಪಾಡಿಯ ಶ್ರೀ ದಯಾನಂದ ಪ್ರಭು ಹಾಗೂ ರೋಹಿಣಿ ದಂಪತಿಗಳ ಪುತ್ರಿ ಕು. ಅನುಪಮ .ಬಿ., ನೆಟ್ಲ ಪಿಲಿಂಜ ಮನೆಯ ದಿ। ಸುರೇಶ್ ಪೂಜಾರಿ ಹಾಗೂ ರೇವತಿ ದಂಪತಿಗಳ ಪುತ್ರಿ ಕು. ಭವ್ಯ ರ್‍ಯಾಂಕ್ ಪಡೆದಿರುತ್ತಾರೆ. ವಿದ್ಯಾರ್ಥಿಗಳ ಸಾಧನೆಗೆ ಶ್ರೀರಾಮ ವಿದ್ಯಾಕೇಂದ್ರ ಸಂಚಾಲಕರು, ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ವಿದ್ಯಾಕೇಂದ್ರ ಶಿಕ್ಷಕ ವೃಂದ ಅಭಿನಂದನೆ ಸಲ್ಲಿಸಿದ್ದಾರೆ.

## ಪರಿಸರ ದಿನಾಚರಣೆ 6.6.2016



ಪರಿಸರ ಮತ್ತು ಮಾನವನ ನಡುವೆ ತಾಯಿ ಮಗುವಿನ ಭಾವನಾತ್ಮಕ ಸಂಬಂಧವಿದೆ. ಪರಿಸರ ಉಳಿದರೆ ಮಾತ್ರ ಮಾನವನ ಬದುಕು ಸರಾಗವಾಗಿ ಸಾಗಬಹುದು. ಆದುರಿಂದ ಪರಿಸರ ಉಳಿಸುವ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಎಂದು ಶ್ರೀ ವೆಂಕಟೇಶ್ವರ ಅಮ್ಮೆ ರಾ.ಸ್ವ.ಸಂಘದ ವಿಟ್ಲ ತಾಲೂಕು ಸಂಘಚಾಲಕ ಕರೆ ನೀಡಿದರು.

ಇನ್ನೋರ್ವ ಅತಿಥಿಗಳಾದ ಪ್ರೌಢ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಶ್ರೀ ವಿಶ್ವನಾಥ ಪ್ರಭು ಮಾತನಾಡಿ ಮಾನವ ಸೂಕ್ಷ್ಮತೆಯಿಂದ ನೀರನ್ನು ಬಳಸಬೇಕು ಎಂದು ನೀರಿನ ಮಹತ್ವದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮ ವಿದ್ಯಾಕೇಂದ್ರ ಮುಖ್ಯಕಾರ್ಯನಿರ್ವಾಹಕ ಶ್ರೀ ವಸಂತ ಮಾಧವ, ವಹಿಸಿದ್ದರು. ವಿದ್ಯಾ-ಕೇಂದ್ರದ ಸಂಚಾಲಕರು ಡಾ. ಪ್ರಭಾಕರ ಭಟ್, ಬಂಟ್ವಾಳ ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ದಿನೇಶ್ ಅಮ್ಟೂರು, ಶಾಲಾ ಮುಖ್ಯೋಪಾಧ್ಯಾಯರು ಶ್ರೀ ರಮೇಶ ಶ್ರೀಮಾನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಅತಿಥಿಗಳು ಗಿಡ ನೆಡುವ ಮೂಲಕ ಚಾಲನೆ ನೀಡಿದರು. ನಂತರ ವಿದ್ಯಾರ್ಥಿಗಳ ಪರಿಸರದ ಮಹತ್ವ ಸಾರುವ ಪರಿಸರಗೀತೆ ಹಾಡಿದರು.

## ವಿಶ್ವ ಯೋಗ ದಿನಾಚರಣೆ



ಒಬ್ಬ ವ್ಯಕ್ತಿಯ ಮಾನಸಿಕ, ಶಾರೀರಿಕ, ಆಧ್ಯಾತ್ಮಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಯೋಗದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಯೋಗದ ಮೂಲಕ ಸಮಾಜದಲ್ಲಿ ಉತ್ತಮ ಚಿಂತನೆಯ ವ್ಯಕ್ತಿಗಳ ನಿರ್ಮಾಣವಾಗುತ್ತದೆ. ಇದರ ಮೂಲಕ ಸದೃಢ ರಾಷ್ಟ್ರದ ನಿರ್ಮಾಣ ಸಾಧ್ಯ ಎಂದು ಶ್ರೀರಾಮ ಪ್ರೌಢಶಾಲೆಯ ಅಧ್ಯಾಪಕ ಪ್ರಶಾಂತ್ ಅಡ್ಕಸ್ಥಳ, ತಿಳಿಸಿದರು.

ಅವರು ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನಡೆದ ವಿಶ್ವ ಯೋಗ ದಿನದ ಕಾರ್ಯಕ್ರಮದಲ್ಲಿ ಯೋಗದ ಮಹತ್ವದ ಬಗ್ಗೆ ಮಾತನಾಡಿದರು.




ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ವಿದ್ಯಾಕೇಂದ್ರದ ಕಾರ್ಯನಿರ್ವಹಣಾಧಿಕಾರಿ ವಸಂತ ಮಾಧವ ಮಾತನಾಡಿ ಭಾರತ ತನ್ನ ಜ್ಞಾನವನ್ನು ಜಗತ್ತಿಗೆ ನೀಡಿದೆ. ಜಗತ್ತಿಗೆ ಶ್ರೇಯಸ್ಸನ್ನು ಉಂಟು ಮಾಡುವ ಅನೇಕ ಕೊಡುಗೆಗಳನ್ನು ನೀಡಿದೆ. ಯೋಗವು ಪ್ರಪಂಚಕ್ಕೆ ನೀಡಿದ ಭಾರತದ ಶ್ರೇಷ್ಠ ಕೊಡುಗೆಯಾಗಿದೆ ಎಂದರು.

ಮುಖ್ಯ ಶಿಕ್ಷಕ ರಮೇಶ್ ಎನ್. ಉಪಸ್ಥಿತರಿದ್ದರು. ಶಾರೀರಿಕ ಶಿಕ್ಷಕ ರಾಧಾಕೃಷ್ಣ ಅಡ್ಯಂತಾಯ ಕಾರ್ಯಕ್ರಮ ಸಂಯೋಜಿಸಿದರು. ವಿದ್ಯಾರ್ಥಿಗಳಾದ ಗೌತಮಿ ಸ್ವಾಗತಿಸಿ, ಹರ್ಷಿತಾ ನಿರೂಪಿಸಿ, ಅಶಿತಾ ವಂದಿಸಿದರು. ನಾಡಿ ಶುದ್ಧಿ ಪ್ರಾಣಾಯಾಮದ ಬಳಿಕ ವಿದ್ಯಾರ್ಥಿಗಳು ಸಾಮೂಹಿಕವಾಗಿ ತಾಡಾಸನ, ಪಾದಹಸ್ತಾಸನ, ವಜ್ರಾಸನ, ಶಶಾಂಕಾಸನ ಮೊದಲದ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

## ಸಂಸ್ಕೃತ ಸಂಭಾಷಣಾ ಶಿಬಿರ

ದಿನಾಂಕ : 15.06.2016

ಸಂಸ್ಕೃತ ದೇವಭಾಷೆ. ಇಂತಹ ಶ್ರೇಷ್ಠ ಭಾಷೆಯನ್ನು ಉಳಿಸುವ ಕಾರ್ಯವನ್ನು ನಾವು ಮಾಡಬೇಕು. ಅದಕ್ಕಾಗಿ ದಿನನಿತ್ಯದ ವ್ಯವಹಾರದಲ್ಲಿ ಈ ಭಾಷೆಯನ್ನು ಬೆಳೆಸುವ ಕಾರ್ಯವಾಗಬೇಕು ಎಂದು ಶ್ರೀಮತಿ ಲತಾ, ಸಂಸ್ಕೃತ ಉಪನ್ಯಾಸಕಿ, ಶ್ರೀರಾಮ ಪದವಿಪೂರ್ವ ಕಾಲೇಜು ಕಲ್ಲಡ್ಕ ತಿಳಿಸಿದರು.



ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ಒಂದು ವಾರಗಳ ಕಾಲ ನಡೆದ ಸಂಸ್ಕೃತ ಸಂಭಾಷಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಶಿಬಿರದ ಸಂಪನ್ಮೂಲ ವ್ಯಕ್ತಿಯಾದ ಕು. ಮಧು ಭಟ್ ವೇದಿಕೆಯಲ್ಲಿದ್ದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕರಾದ ಶ್ರೀ ರಮೇಶ್ ಶ್ರೀಮಾನ್ ಉಪಸ್ಥಿತರಿದ್ದರು.

## ತಾಳವಾದ್ಯಗಳ ತರಬೇತಿ



ಪ್ರೌಢ ಮತ್ತು ಪ್ರಾಥಮಿಕ ಶಾಲಾ ವಿಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಅವರವರ ಆಸಕ್ತಿಗನುಗುಣವಾಗಿ ವಾರದಲ್ಲೊಮ್ಮೆ ತಾಳವಾದ್ಯಗಳ ತರಗತಿಗಳು ನಡೆಯುತ್ತಿದ್ದು ಸುಮಾರು 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಂಟ್ವಾಳದ ಶ್ರೀ ದೇವದಾಸ್ ಪ್ರಭು ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

# ಪದವಿಪೂರ್ವ ವಿಭಾಗ

## ಸಂಸ್ಕೃತ ಸಂಭಾಷಣಾ ಶಿಬಿರ :

ಸಂಸ್ಕೃತ ಭಾರತಿ ಮತ್ತು ಪದವಿಪೂರ್ವ ವಿಭಾಗದ ಸಂಸ್ಕೃತ ಸಂಘದ ವತಿಯಿಂದ ಹತ್ತು ದಿನದ 'ಸಂಸ್ಕೃತ ಭಾಷಾ ಶಿಬಿರ'ವನ್ನು ಕುಮಾರಿ ಮಧು ಭಟ್‌ರವರು ನಡೆಸಿಕೊಟ್ಟರು. ದಿನಾಂಕ 15-06-2016 ರಿಂದ 25-06-2016ರವರೆಗೆ ನಡೆದ ಶಿಬಿರದಲ್ಲಿ ಸಂಸ್ಥೆಯ ಪ್ರಥಮ ಪದವಿ ಪೂರ್ವ ವಿದ್ಯಾರ್ಥಿ- ವಿದ್ಯಾರ್ಥಿನೀಯರು ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದರು.

## ರಸಾಯನ ಶಾಸ್ತ್ರ ಉಪನ್ಯಾಸಕರ ಕಾರ್ಯಾಗಾರ 27-06-2016



ಪದವಿಪೂರ್ವ ಶಿಕ್ಷಣ ಇಲಾಖೆ, ದ.ಕ. ಜಿಲ್ಲಾ ಪದವಿಪೂರ್ವ ಕಾಲೇಜು ಪ್ರಾಂಶುಪಾಲರ

ಸಂಘ, ದ.ಕ. ಜಿಲ್ಲಾ ಪದವಿ ಪೂರ್ವ ಕಾಲೇಜು ರಸಾಯನ ಶಾಸ್ತ್ರ ಉಪನ್ಯಾಸಕರ ವೇದಿಕೆ, ಮತ್ತು ಶ್ರೀರಾಮ ಪದವಿಪೂರ್ವ ವಿದ್ಯಾಲಯ ಕಲ್ಲಡ್ಕ, ಇವರ ಸಂಯುಕ್ತ ಆಶ್ರಯದಲ್ಲಿ ದ.ಕ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ರಸಾಯನ ಶಾಸ್ತ್ರ ಉಪನ್ಯಾಸಕರಿಗಾಗಿ ಒಂದು ದಿನದ ಕಾರ್ಯಾಗಾರ ನಡೆಯಿತು.

ವಿಜ್ಞಾನ ಕ್ಷೇತ್ರದಲ್ಲಿ ಭಾರತೀಯರು ಉನ್ನತ ಸಾಧನೆಗಳು ಮಾಡಿದ್ದಾರೆ. ಪಾಶ್ಚಿಮಾತ್ಯರು ಮಾತ್ರ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ ಎಂಬ ಭ್ರಮೆಯಿಂದ ಹೊರಬನ್ನಿ. ನಮ್ಮ ಋಷಿಮುನಿಗಳು ಧ್ಯಾನದ ಮೂಲಕ ತಮ್ಮನ್ನು ತಾವು ಅರಿತುಕೊಂಡರು.

ಜಗತ್ತನ್ನೂ ಕೂಡ ಅರಿತರು. ನಾವು ಕೀಳಲ್ಲ, ನಮ್ಮ ಹಿರಿಯರು ಸಾಧನೆ ಮಾಡಿದ್ದಾರೆ, ನಾವು ಸಾಧನೆ ಮಾಡುತ್ತಿದ್ದೇವೆ. ಮತ್ತೂ ನಮ್ಮ ಮುಂದಿನ ಮಕ್ಕಳು ಕೂಡ ಸಾಧನೆ ಮಾಡುತ್ತಾರೆ ಎಂದು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರು ಡಾ. ಪ್ರಭಾಕರ ಭಟ್ ಕಲ್ಲಡ್ಕ ಉದ್ಘಾಟನೆ ಮಾಡಿ ಮಾತನಾಡಿದರು.

ದ.ಕ. ಜಿಲ್ಲಾ ಪ.ಪೂ ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷರು ಸರಸ್ವತಿ ಇವರು ಅಧ್ಯಕ್ಷೀಯ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ. ಜಿ.ಬಿ ಈರೇಗೌಡ ಹಿರಿಯ ರಸಾಯನಶಾಸ್ತ್ರ ಉಪನ್ಯಾಸಕರು ಸರಕಾರಿ ಪದವಿಪೂರ್ವ ಕಾಲೇಜು, ಯಲಹಂಕ-ಬೆಂಗಳೂರು, ಶ್ರೀ ವಸಂತ ಶೆಟ್ಟಿ ನಿವೃತ ಪ್ರಾಚಾರ್ಯರು, ಸುಬ್ರಹ್ಮಣ್ಯ ಪ.ಪೂ. ಕಾಲೇಜು, ಸುಬ್ರಹ್ಮಣ್ಯ, ಶ್ರೀ ಜಯಾನಂದ ಸುವರ್ಣ, ಅಧ್ಯಕ್ಷರು ದ.ಕ.ಜಿ.ಪ.ಪೂ. ಕಾಲೇಜು ರಸಾಯನ ಶಾಸ್ತ್ರ ಉಪನ್ಯಾಸಕರ ಸಂಘ, ಶ್ರೀ ವಸಂತ ಬಲ್ಲಾಳ್ ಪ್ರಾಂಶುಪಾಲರು ಶ್ರೀರಾಮ ಪ. ಪೂ. ವಿದ್ಯಾಲಯ ಕಲ್ಲಡ್ಕ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಎಸ್.ಡಿ.ಎಂ. ಕಾಲೇಜು ಉಜಿರೆಯ ರಸಾಯನಶಾಸ್ತ್ರ ವಿಭಾಗ ಮುಖ್ಯಸ್ಥರಾದ ರಾಜೇಶ್ ಕೆ ಸ್ವಾಗತಿಸಿ, ಶ್ರೀರಾಮ ಪ.ಪೂ ಕಾಲೇಜಿನ ಉಪನ್ಯಾಸಕಿಯರಾದ ರಕ್ಷಿತಾ ವಂದಿಸಿ, ಜಯಲಕ್ಷ್ಮೀ ಕೆ ನಿರೂಪಿಸಿದರು.

## ಪ್ರತಿಭಾನ್ವೇಷಣೆ :

'ಭಾವನಾ' ಸಾಂಸ್ಕೃತಿಕ ಸಂಘದ ವತಿಯಿಂದ ದಿನಾಂಕ 29/06/2016 ನೇ ಬುಧವಾರದಂದು ಪ್ರತಿಭಾನ್ವೇಷಣೆ ಕಾರ್ಯಕ್ರಮ ನಡೆಯಿತು. ಪದವಿ ವಿಭಾಗದ ಕನ್ನಡ ಉಪನ್ಯಾಸಕರಾದ ಶ್ರೀಯುತ ಯತಿರಾಜ್ ಇವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಸಂಘದ ನಿರ್ದೇಶಕಿ ಶ್ರೀಮತಿ ಶೋಭಾ. ವಿ. ಶೆಟ್ಟಿ ಮತ್ತು ಸಹ ನಿರ್ದೇಶಕಿ ಕುಮಾರಿ ರಕ್ಷಿತಾ ಇವರು ಕಾರ್ಯಕ್ರಮ ನಿರೂಪಿಸಿದರು.

## ವಿಶ್ವ ಯೋಗ ದಿನಾಚರಣೆ

21-6-2016

ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಯೋಗದ ಪಾತ್ರ ಪ್ರಮುಖವಾಗಿದೆ. ಯೋಗ ದಿನಾಚರಣೆಯನ್ನು ಆಚರಿಸುವ ಮೂಲಕ ಎಲ್ಲರಿಗೂ ಆರೋಗ್ಯ, ಆಯುಷ್ಯ ವೃದ್ಧಿಸಲು ಸಹಕಾರಿಯಾಗಿದೆ ಎಂದು ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಸಂಚಾಲಕ ಡಾ|ಪ್ರಭಾಕರ ಭಟ್ ಹೇಳಿದರು.



ಶ್ರೀಭಾರತಿ ಕಾಲೇಜು ನಂತೂರು ಮಂಗಳೂರಿನ ಸಂಸ್ಕೃತ ಉಪನ್ಯಾಸಕ ಡಾ.ಈಶ್ವರ ಪ್ರಸಾದ್ ಯೋಗ ದಿನಾಚರಣೆ ಹಾಗೂ ಯೋಗದ ಮಹತ್ವವನ್ನು ತಿಳಿಸಿದರು. ಷಡ್ದರ್ಶನಗಳು, ಅಷ್ಟಾಂಗ ಯೋಗಗಳು ದಿನನಿತ್ಯದ ಜೀವನಕ್ಕೆ ಪೂರಕವಾಗಿವೆ ಎಂದು ಪಾತಂಜಲಿ ಯೋಗ ಸೂತ್ರದ ಬಗ್ಗೆ ಮಾಹಿತಿ ನೀಡಿದರು. ಯೋಗದ ಮೂಲಕ ಮನಸ್ಸು, ಶರೀರ ಶುದ್ಧಿಗೊಳ್ಳುವುದಲ್ಲದೆ ಆಧ್ಯಾತ್ಮಿಕ ವಿಕಸನವಾಗುತ್ತದೆ ಎಂದರು.




ವೇದಿಕೆಯಲ್ಲಿ ಶ್ರೀರಾಮ ಪದವಿ ಕಾಲೇಜಿನ ಪ್ರಾಚಾರ್ಯ ಕೃಷ್ಣಪ್ರಸಾದ್ ಪ.ಪೂ. ಕಾಲೇಜಿನ ಉಪನ್ಯಾಸಕ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ವೈಭವ್, ಶಶಾಂಕ, ಚೇತನ್, ಅಭಿಷೇಕ್ ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿದರು. ಉಪನ್ಯಾಸಕ ತಿರುಮಲೇಶ್ವರ ಪ್ರಶಾಂತ ಸ್ವಾಗತಿಸಿದರು. ಶಾರೀರಿಕ ನಿರ್ದೇಶಕ ಕರುಣಾಕರ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕಿ ಶೋಭಾ ವಿ.ಶೆಟ್ಟಿ ವಂದಿಸಿದರು.

## ಡೆಂಗ್ಯು ಜ್ವರ- ಮಾಹಿತಿ ಕಾರ್ಯಾಗಾರ

ಜೂನ್ 06, 2016

ಶ್ರೀರಾಮ ಪದವಿ ಪೂರ್ವ ವಿದ್ಯಾಲಯ ವಿಜ್ಞಾನ ಸಂಘದ ವತಿಯಿಂದ 'ಡೆಂಗ್ಯು ಜ್ವರದ ಬಗೆಗಿನ ಮಾಹಿತಿ ಹಾಗೂ ತಡೆಗಟ್ಟುವ ವಿಧಗಳು' ಎಂಬ ವಿಚಾರಗಳ ಕುರಿತಾದ ಮಾಹಿತಿ ಕಾರ್ಯಾಗಾರ ನಡೆಯಿತು.



ದೀರ್ಘಕಾಲದ ಜ್ವರ, ತೀವ್ರ ನಿಶ್ಯಕ್ತಿ, ಮೈ ಕೈ ನೋವು, ವಿಪರೀತ ತಲೆನೋವು ಮುಂತಾದ ಡೆಂಗ್ಯು ಜ್ವರದ ಲಕ್ಷಣಗಳ ಬಗ್ಗೆ ಮಾಹಿತಿ ನೀಡಿದರು. ಮುಂಜಾಗ್ರತ ಕ್ರಮವಾಗಿ ಪರಿಸರ ಸ್ವಚ್ಛವಾಗಿಡಲು ಸೂಚಿಸಿ, ಎಚ್ಚರಿಕೆಯ ಕ್ರಮ ಕೈಗೊಳ್ಳಬೇಕು. ಔಷಧಕ್ಕಿಂತಲು ಮೊದಲಾಗಿ ಎಲ್ಲರಲ್ಲಿಯೂ ಆತ್ಮಧೈರ್ಯ ಮತ್ತು ದೃಢತೆ ಅಗತ್ಯ. ರೋಗಿಯನ್ನು ಆತನ ಮಾನಸಿಕ ದೃಢತೆಯೇ ರಕ್ಷಿಸುತ್ತದೆ ಎಂದು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಾಳ್ತಿಲ ಪ್ರಾಥಮಿಕ ಆರೋಗ್ಯಕೇಂದ್ರದ ವೈದ್ಯಾಧಿಕಾರಿ ಶ್ರೀ ಡಾ. ವಿಶ್ವೇಶ್ವರ ವಿ.ಕೆ. ತಿಳಿಸಿದರು.

ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ಉಪನ್ಯಾಸಕಿ ಶ್ರೀಮತಿ ವಿಲಾಸಿನಿ ಹಾಗೂ ಜೀವಶಾಸ್ತ್ರದ ಉಪನ್ಯಾಸಕಿ ಶೈಲಿನಿ ಉಪಸ್ಥಿತರಿದ್ದರು.

## ಚುನಾವಣೆ :





ದಿನಾಂಕ 25.06.2016ನೇ ಶನಿವಾರ ಕಾಲೇಜು ಚುನಾವಣೆ ನಡೆಯಿತು. ಮತಗಳ ಎಣಿಕೆ ಕಾರ್ಯವು ಅಂದೇ ನಡೆದಿದ್ದು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಎರಡನೇ ವಾಣಿಜ್ಯ ವಿಭಾಗದ ಸ್ವಸ್ತಿಕ್, ಕಾರ್ಯದರ್ಶಿಯಾಗಿ ಎರಡನೇ ವಾಣಿಜ್ಯ ವಿಭಾಗದ ಪ್ರದೀಪ್ ಮತ್ತು ಸಹಕಾರ್ಯದರ್ಶಿಯಾಗಿ ಎರಡನೇ ವಾಣಿಜ್ಯ ವಿಭಾಗದ ಜಯಶ್ರೀ ಆಯ್ಕೆ ಕೊಂಡಿರುತ್ತಾರೆ.



## ಗೌತಮ್ ಭಟ್ ಬಿ.

ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾ, ಹೊಸದಿಲ್ಲಿ ಸಂಸ್ಥೆ ವತಿಯಿಂದ ನವೆಂಬರ್ ನಲ್ಲಿ ನಡೆದ ಸಿ.ಎ. ಪರೀಕ್ಷೆಯಲ್ಲಿ ಬಂಟ್ವಾಳದ ಗೌತಮ್ ಭಟ್ ಬಿ. ಉತ್ತೀರ್ಣರಾಗಿದ್ದಾರೆ. ಸಿ.ಎ. ಪರೀಕ್ಷೆಯ 3 ಹಂತವನ್ನು ಪ್ರಥಮ ಯತ್ನದಲ್ಲೇ ಪೂರ್ಣಗೊಳಿಸಿದ್ದು ಮಂಗಳೂರಿನ ಹೆಸರಾಂತ ಲೆಕ್ಕಪರಿಶೋಧಕ ಎ. ರಾಘವೇಂದ್ರ ರಾವ್, G.H.S.Road ಅವರಿಂದ ತರಬೇತಿ ಪಡೆದಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ 2012ನೇ ಸಾಲಿನ ಪರೀಕ್ಷೆಯಲ್ಲಿ 5ನೇ ರ‍್ಯಾಂಕನ್ನು ಗಳಿಸಿದ ಇವರು Accounting ವಿಭಾಗದಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾ ಇದರ ಚಿನ್ನದ ಪದಕ ಪ್ರಶಸ್ತಿಯನ್ನು ಗಳಿಸಿರುತ್ತಾರೆ

**ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ ಇಲ್ಲಿ ಪೂರ್ಣಗೊಳಿಸಿದ ಇವರಿಗೆ ಸರಯೂ ಬಳಗದಿಂದ ಅಭಿನಂದನೆಗಳು.**

## ಗಣಿತ ಸಂಖ್ಯಾ ಬಂಧ

**(ಮೇಲಿನಿಂದ ಕೆಳಕ್ಕೆ)**

1. 81ರ ಎರಡು ಸಮಅಪವರ್ತನಗಳನ್ನು '7'ರ ಜೊತೆಯಲ್ಲಿ ಕೂಡಿಸಿದಾಗ ಬರುವ ಉತ್ತರ
2. ಮೊದಲ ಅಂಕಿ ಒಂದು ಪೂರ್ಣ ವರ್ಗ ಸಂಖ್ಯೆ. ಎರಡನೆ ಅಂಕಿ ಮೊದಲ ಅಂಕಿಯ ಎರಡರಷ್ಟಿವೆ.

**ಎಡದಿಂದ ಬಲಕ್ಕೆ**

3. 2ನೇ ಅಂಕಿಯ ಮೊದಲನೇ ಅಂಕಿಯ 3ರಷ್ಟಿರುವ ಸಂಖ್ಯೆಯ ವರ್ಗ
4. ಈ ಸಂಖ್ಯೆಯು ಒಂದು ಪೂರ್ಣ ಘನವೂ ಹೌದು ಮತ್ತು ಪೂರ್ಣ ವರ್ಗವೂ ಹೌದು.




(2ನೇ ಪುಟದಿಂದ)

## ರೋಗನಿರೋಧಕ ಉಪ್ಪು

ಚೇಳು ಕಚ್ಚಿದ ಜಾಗಕ್ಕೆ ಉಪ್ಪನ್ನು ಸವರಿಸಿದರೆ ವಿಷ ಏರುವುದಿಲ್ಲ. ಹಾಗೆಯೇ ಇಂಬಳ ಕಚ್ಚಿದಾಗಲೂ ಉಪ್ಪನ್ನು ಸವರಿದರೆ ಇಂಬಳ ಕೂಡಲೇ ಬಿದ್ದು ಹೋಗುವುದು. ಕಲ್ಲೊತ್ತು, ಹಿಮ್ಮಡಿ ನೋವು ಇತ್ಯಾದಿ ನೋವುಗಳಿಗೆ ಒಲೆ ಕಟ್ಟೆಯ ಬಳಿ ಉಪ್ಪು ಹಾಕಿ ತಾವು ಸಹಿಸಿಕೊಳ್ಳಲು ಸಾಧ್ಯವಾಗುವಷ್ಟು ಹೊತ್ತು ಉಪ್ಪಿನ ಮೇಲೆ ಕಾಲನ್ನು ಇಡಬೇಕು. ನಾಲ್ಕಾರು ದಿನ ಈ ರೀತಿ ಮಾಡಿದಾಗ ನೋವು ಕಡಿಮೆಯಾಗುತ್ತದೆ.

ನೋವು, ಬಾವುಗಳಿಗೆ ತೆಂಗಿನೆಣ್ಣೆ ಬಿಸಿಮಾಡಿ, ಅದಕ್ಕೆ ಕಲ್ಲುಪ್ಪು ಬೆರೆಸಿ, ಎಣ್ಣೆ ಉಜ್ಜಿದರೂ ಗುಣ ಕಾಣುವುದು. ಕಾಲು ಉಳುಕಿದಾಗ ಅರಶಿನ ಕೊಂಬು ಅರೆದು ಕಲ್ಲುಪ್ಪನ್ನು ಚೆನ್ನಾಗಿ ಹುಡಿ ಮಾಡಿ ಬೆರೆಸೆ ಗಂಧದಂತೆ ಲೇಪಿಸಿದರೆ ನೋವು ಕಡಿಮೆಯಾಗುವುದು. ಮೂತ್ರಜನಕಾಂಗವು ಸರಿಯಾಗಿ ಕಾರ್ಯನಿರ್ವಹಿಸಲು ಉಪ್ಪಿನಾಂಶ ಬೇಕು. ನೀರಿಗೆ ಒಂದು ಚಮಚ ಉಪ್ಪು ಬೆರೆಸಿ ಕುಡಿದರೆ ಮೂತ್ರಜನಕಾಂಗದ ಕಾರ್ಯಕ್ಷಮತೆ ಹೆಚ್ಚುತ್ತದೆ. ಉಪ್ಪನ್ನು ಸರಿಯಾಗಿ ಕರಗಿಸಿಯೇ ಕುಡಿಯಬೇಕು. ಉಪ್ಪು ಕರಗದೆ ಉಳಿದರೆ ಅದು ನಿರ್ಜಲೀಕರಣಕ್ಕೆ ಕಾರಣವಾಗುತ್ತದೆ. ಆ ಮೂಲಕ ಮೂತ್ರಜನಕಾಂಗದ ಕಾರ್ಯಕ್ಕೆ ಅಡ್ಡಿಯುಂಟಾಗುತ್ತದೆ.

ದೇಹದ ಫಿಟ್‌ನೆಸ್ ಕಾಪಾಡಿಕೊಳ್ಳಲು ಉಪ್ಪು ನೀರಿನ ಸೇವನೆ ಒಳ್ಳೆಯದು. ಉಪ್ಪು ನೀರು ಕುಡಿದರೆ ದೇಹದ ಉಪ್ಪಿನ ಮಟ್ಟ ಸ್ಥಿರವಾಗಿರುತ್ತದೆ ಮತ್ತು ಹೆಚ್ಚು ಹಸಿವೆಯೂ ಆಗುವುದಿಲ್ಲ.

## ಚಿತ್ರ ನೋಡಿ ಶೀರ್ಷಿಕೆ ನೀಡಿ



ಈ ಚಿತ್ರಕ್ಕೆ ಸೂಕ್ತ ಶೀರ್ಷಿಕೆ ಬರೆದು ನಿಮ್ಮ ವಿಭಾಗದಲ್ಲಿಟ್ಟಿರುವ ಸರಯೂ ಪೆಟ್ಟಿಗೆಗೆ ಯಾ ಅಂಚೆ ಮೂಲಕ ಸಂಪಾದಕರಿಗೆ ಕಳುಹಿಸಿಕೊಡಿ. ಶೀರ್ಷಿಕೆ ಒಂದು ಯಾ ಎರಡು ವಾಕ್ಯದಲ್ಲಿರಲಿ. ಉತ್ತಮ ಶೀರ್ಷಿಕೆಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಹೆಸರು, ತರಗತಿ, ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ.

## ಸಪ್ತ ಸ್ವರಗಳು

**ಮತಿಗೆ ಮಾಹಿತಿ**




### ಒಟ್ಟು ಏಳು ಸ್ವರಗಳು

ಷಡ್ಜಮ್
ಋಷಭಮ್
ಗಾಂಧಾರಂ
ಮಧ್ಯಮಮ್
ಪಂಚಮಮ್
ಧೈವತಮ್
ನಿಶಾಧಮ್

ಇವುಗಳನ್ನು ಚುಟುಕಾಗಿ ಸ, ರಿ, ಗ, ಮ, ಪ, ಧ, ನಿ ಎನ್ನುತ್ತೇವೆ. ಸಂಗೀತದ ಎಲ್ಲಾ ರಾಗಗಳಿಗೆ ಈ ಸ್ವರಗಳೇ ಮೂಲ. ಸಂಗೀತ ರತ್ನಾಕರ ಎಂಬ ಪ್ರಾಚೀನ ಗ್ರಂಥದಲ್ಲಿ ಇದರ ವಿವರಣೆ ಇದೆ.

# ಮಾಜಿ ಡಿವೈಎಸ್‌ಪಿ ಅನುಪಮಾ ಶೆಣೈ ಭೇಟಿ







ಕೂಡಲಗಿಯ ಮಾಜಿ ಡಿವೈಎಸ್‌ಪಿ ಅನುಪಮಾ ಶೆಣೈಯವರು ವಿದ್ಯಾಸಂಸ್ಥೆಗೆ ದಿನಾಂಕ 29.06.2016 ನೇ ಬುಧವಾರ ಭೇಟಿ ನೀಡಿದರು. ಇಲ್ಲಿನ ಶಿಕ್ಷಣ ಪದ್ಧತಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು ವಿದ್ಯಾರ್ಥಿ–ವಿದ್ಯಾರ್ಥಿನಿಯರೊಂದಿಗೆ ಮುಕ್ತವಾಗಿ ಬೆರೆತು ಮಾತುಕತೆ ನಡೆಸಿದರು. ಪದವಿಪೂರ್ವ ವಿಭಾಗದ ಸರಸ್ವತಿ ವಂದನಾದಲ್ಲಿ ಭಾಗವಹಿಸಿದ ಅವರು ವಿದ್ಯಾರ್ಥಿಗಳ ಹಲವಾರು ಪ್ರಶ್ನೆಗಳಿಗೆ ತಮ್ಮ ಜೀವನ ಅನುಭವದ ಉದಾಹರಣೆಗಳ ಮೂಲಕ ಉತ್ತರನೀಡಿದರು. ಕಾರ್ಯಕ್ರಮದಲ್ಲಿ ಅನುಪಮಾರವರ ಸಹೋದರ ಅಚ್ಯುತ ಶೆಣೈ, ಸಂಸ್ಥೆಯ ಸಂಚಾಲಕರಾದ ಡಾ. ಪ್ರಭಾಕರ ಭಟ್, ಶ್ರೀಮತಿ ಕಮಲಾ ಪ್ರಭಾಕರ ಭಟ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

"ಭ್ರಷ್ಟಾಚಾರದ ಸುಳಿಗೆ ಸಿಲುಕುವ ಅದೆಷ್ಟೋ ಮುಗ್ಧರ ಪರವಾಗಿ ಮಾತಾಡಿದ ಅವರು, ಎಲ್ಲಾ ಸಾಮಾಜಿಕ ಕೆಡುಕನ್ನು ಹೊಡೆದೋಡಿಸಲು ವಿದ್ಯಾರ್ಥಿಗಳು ಜಾಗೃತರಾಗಬೇಕು ಅಲ್ಲದೇ ಸಮಾಜದಲ್ಲಿನ ದುಶ್ಚಟ ಹಾಗೂ ಮೋಸಗಳಿಗೆ ಬಲಿಯಾಗದೆ ಉತ್ತಮ, ಆದರ್ಶ ವ್ಯಕ್ತಿಗಳಾಗಬೇಕು" –ಅನುಪಮಾ ಶೆಣೈ

# ಶ್ರೀರಾಮ ಮಂದಿರದಲ್ಲಿ ದೇಶ–ದೇವರ ಪ್ರಾರ್ಥನೆ

ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡ ಕಲ್ಲಡ್ಕದ ಶ್ರೀರಾಮ ಮಂದಿರ ಈ ವಿದ್ಯಾಸಂಸ್ಥೆಯ ಸ್ಥಾಪನೆಯ ಹಿನ್ನೆಲೆಯ ಶಕ್ತಿಯೂ ಹೌದು. ಇದೀಗ ನಮ್ಮ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ವಾರಕ್ಕೊಮ್ಮೆ ಅಲ್ಲೇ ಒಟ್ಟು ಸೇರಿ ರಾಮಮಂತ್ರವ ಜಪಿಸುವ ಹಾಗೂ ವಂದೇಮಾತರಂನ ಮೂಲಕ ಭಾರತಮಾತೆಯ ಸ್ತುತಿಗೈಯ್ಯುವ ಅಪೂರ್ವ ಅವಕಾಶ.

ಶಿಶುಮಂದಿರದಿಂದ ಪದವಿಯವರೆಗಿನ ಎಲ್ಲಾ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಬೆಳಗ್ಗೆ 9ರಿಂದ 9–15ರ ವರೆಗೆ ವಾರದಲ್ಲೊಮ್ಮೆ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಾರೆ. ಅಂದು ಬೆಳಗ್ಗೆ ನೇರವಾಗಿ ಮಂದಿರಕ್ಕೆ ಬರುವ ವಿದ್ಯಾರ್ಥಿಗಳು ಶಿಸ್ತಿನಿಂದ 108 ಮೆಟ್ಟಿಲನ್ನೇರಿ ಪ್ರಾರ್ಥನೆಯಲ್ಲಿ ತೊಡಗುತ್ತಾರೆ.

ಈ ಕಾರ್ಯಕ್ರಮದ ಅನಿಸಿಕೆ ವ್ಯಕ್ತಪಡಿಸುತ್ತಾ ವಿದ್ಯಾರ್ಥಿಯೊಬ್ಬ "ವಾರದಲ್ಲೊಮ್ಮೆಯಾದರೂ ನಮ್ಮ ಶ್ರದ್ಧಾಕೇಂದ್ರಗಳಿಗೆ ಹೋಗಬೇಕೆನ್ನುವ ಭಾವನೆ ನನಗೆ ಮೂಡಿದೆ. ಶಾಲೆಯಲ್ಲಿ ನಡೆಯುವ ಬೇರೆಲ್ಲ ಚಟುವಟಿಕೆಗಳಿಗೆ ಈ ಭೇಟಿಯು ಶಕ್ತಿ ನೀಡಿದೆ ಅಲ್ಲದೆ ದೇಶ ಹಾಗೂ ದೇವರನ್ನು ಒಟ್ಟಾಗಿ ನೆನೆಯುವ ಅಪೂರ್ವ ಅವಕಾಶವಿದು ಎಂದಿದ್ದಾನೆ.

ಈ ಸಂದರ್ಭದಲ್ಲಿ ಅಧ್ಯಾಪಕರು, ಬೋಧಕೇತರರು, ಸಂಸ್ಥೆಯ ಹಿರಿಯರು ಜೊತೆಗಿದ್ದು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಾರೆ. ವ್ಯವಸ್ಥೆಯ ದೃಷ್ಟಿಯಿಂದ ಶಿಶುಮಂದಿರ, ಪೂರ್ವ ಗುರುಕುಲ ಹಾಗೂ ಪದವಿ ವಿಭಾಗಗಳವರು ಪ್ರತಿ ಸೋಮವಾರ ಉಳಿದ ಪ್ರಾಥಮಿಕ, ಪ್ರೌಢ, ಪ.ಪೂ. ವಿಭಾಗದವರು ಪ್ರತಿ ಶನಿವಾರ ಸೇರುವುದು ವಾಡಿಕೆ.




Postal Regn No. PTR/133/2015-17 Licensed to Post without pre-payment License No.: SK/WPP/PTR/177/2015-17

KARKAN/2014/62363
Posted at Kalladka P.O.
on 10th and 15th of
Every month

Vol. : 3 Issue : 2 Rs. 10/-

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363